ISSN : 2583-2948

# ಅಕ್ಕಮಹಾದೇವಿಯ ವಚನಗಳಲ್ಲಿ ಪರಿಸರ ಸ್ತ್ರೀವಾದಿ ನೆಲೆಗಳು



**ಡಾ.ಮಹಾಂತೇಶ ಪಾಟೀಲ**
**ಕನ್ನಡ ಅಧ್ಯಯನ ವಿಭಾಗ**
**ದಾವಣಗೆರೆ ವಿಶ್ವವಿದ್ಯಾನಿಲಯ**
**ಶಿವಗಂಗೋತ್ರಿ-೫೭೭೦೦೭, ದಾವಣಗೆರೆ.**

ಆಧುನಿಕೋತ್ತರ ಕಾಲದ ಸಾಹಿತ್ಯ ಓದಿನ ಕ್ರಮಗಳಲ್ಲಿ ಅಂತರ್ ಶಿಸ್ತೀಯ ಅಧ್ಯಯನಗಳಿಗೆ ಹೆಚ್ಚಿನ ಮನ್ನಣೆ ದೊರಕಿದೆ. ಸಾಹಿತ್ಯ ನಿರ್ವಚನವು ಬಹುಮುಖಿಯಾದ ಆಯಾಮವನ್ನು ಬಯಸುವುದು ಕೂಡ ಅದಕ್ಕೆ ಕಾರಣವಾದಂತಿದೆ. ಸಾಹಿತ್ಯದ ಜೊತೆಗೆ ಚರಿತ್ರೆ, ಸಮಾಜ ಮತ್ತು ಮಾನವಶಾಸ್ತ್ರದ ಅಧ್ಯಯನಗಳೊಟ್ಟಿಗಿಟ್ಟು ನೋಡುವ ವಿದ್ಯಮಾನ ಒಂದು ಕಾಲಕ್ಕೆ ಪ್ರಧಾನವಾಗಿತ್ತು. ಸಮಾಜ ನಿಕಾಯದ ಜ್ಞಾನಶಿಸ್ತುಗಳ ಕೂಡ ವಿಜ್ಞಾನ ನಿಕಾಯದ ಜ್ಞಾನಶಿಸ್ತುಗಳ ಜೊತೆಗೆ ಸಾಹಿತ್ಯ ಪಠ್ಯವನ್ನು ಮೌಲ್ಯಮಾಪನ ಮಾಡುವ ಕ್ರಮವೊಂದು ಆಧುನಿಕೋತ್ತರ ಸಾಹಿತ್ಯ ವಿಮರ್ಶೆಯಲ್ಲಿ ತಲೆಯೆತ್ತಿದೆ. ಮುಖ್ಯವಾಗಿ ಸಾಹಿತ್ಯ ಮತ್ತು ಪರಿಸರ ವಿಜ್ಞಾನ ಸಂಬಂಧವನ್ನು ನಿರೂಪಿಸುವ ವಿಮರ್ಶಾ ಪರಿಭಾಷೆಯಾಗಿ 'ಪರಿಸರವಾದಿ ವಿಮರ್ಶೆ'ಯು ರೂಪತಾಳಿದೆ. ಎಲ್ಲಾ ಜೀವಿಗಳಂತೆ ಮಾನವರು ನಿಸರ್ಗದೊಂದಿಗೆ ಹೊಂದಿರುವ ಸಂಬಂಧದ ಅನನ್ಯತೆಯನ್ನು ಅನಾವರಣಗೊಳಿಸುವುದು- ಈ ಬಗೆಯ ಅಧ್ಯಯನ ಕ್ರಮಗಳ ಪ್ರಮುಖ ಧ್ಯೇಯ್ಯವಾಗಿದೆ.

ಜೀವ ವಿಕಾಸದ ಪ್ರಕ್ರಿಯೆಯಲ್ಲಿ ಮಾನವರು ಕಾಡನ್ನು ತೋರೆಯುತ್ತ ಬಂದು ನಾಡ ಜೀವಿಗಳಾದರು. ಪ್ರಾಣಿಯಾಗಿದ್ದ ಮಾನವನು ನಾಗರಿಕನಾಗಿ ಗುರುತಿಸಿಕೊಳ್ಳಲಾರಂಭಿಸಿದನು. ಆದರೆ ಮನುಷ್ಯರ ಮಾನಸಿಕ ಮತ್ತು ದೈಹಿಕ ರಚನೆಗಳು ನಿಸರ್ಗದಿಂದ ಪ್ರಭಾವಿತವಾಗಿ ರೂಪಗೊಂಡಿರುವುದನ್ನು

ಮರೆಯುವ ಹಾಗಿಲ್ಲ. ಈ ಬಗೆಯ ಸಂವೇದನೆಗಳ ಮರನೋಟವು ಪರಿಸರವಾದಿ ವಿಮರ್ಶೆಯಿಂದ ಪುನಃ ತೆರೆದುಕೊಂಡಿತು. ಒಟ್ಟು ಜೈವಿಕ ವ್ಯವಸ್ಥೆಯಲ್ಲಿ ಪರಿಸರ ಕೇಂದ್ರಿತ, ಜೀವ ಕೇಂದ್ರಿತ ಮತ್ತು ಮನುಷ್ಯ ಕೇಂದ್ರಿತ ಪ್ರಜ್ಞೆಗಳು ಬೆಳೆದು ಬಂದಿವೆ. ಪರಿಸರದಿಂದ ಪ್ರಜ್ಞೆ ಎನ್ನುವುದನ್ನು ನಿರಾಕರಿಸಿ, ಸಮಾಜದಿಂದ ಪ್ರಜ್ಞೆ ಎಂಬುವುದನ್ನು ಮಂಡಿಸುತ್ತವೆ. ಆದರೆ ಪರಿಸರವಾದಿ ವಿಮರ್ಶೆಯು ಮಾನವರು ಸಹ ಜೀವ ವೈವಿಧ್ಯತೆಯ ಭಾಗವಾಗಿರುವುದರಿಂದ, ಅವರನ್ನಷ್ಟೇ ಪ್ರಧಾನವಾಗಿ ಪ್ರತಿಬಿಂಬಿಸುವುದು ಉಳಿದ ಜೈವಿಕ ಸಮತೋಲನವನ್ನು ಅಸಮತೋಲನ ಮಾಡಿದಂತಾಗುತ್ತದೆ. ಹಾಗಾಗಿ ಪರಿಸರ ಕೇಂದ್ರಿತ ಪ್ರಜ್ಞೆಯೇ ಮುಖ್ಯವಾಗಬೇಕೆನ್ನುವುದು ಪರಿಸರವಾದಿಗಳ ನಿಲುವು.

ವಚನ ಸಾಹಿತ್ಯ ಶ್ರೇಷ್ಠತೆ ಇರುವುದೇ ಅದರ ಬಹುಮುಖಿ ಸಂವೇದನೆಯಲ್ಲಿ. ವಚನಕಾರರೆಲ್ಲಾ ಕಲ್ಯಾಣವನ್ನು ಕೇಂದ್ರವಾಗಿಸಿಕೊಂಡರೂ, ಅವರು ನಾಡಿನ, ದೇಶದ ವೈವಿಧ್ಯಮಯ ಪರಿಸರಗಳ ಹಿನ್ನಲೆಯಿಂದ ಬಂದವರಾಗಿದ್ದರು. ಭಕ್ತಿಯ ನಿರೂಪಣೆಯಲ್ಲಿ ಸಾಂದರ್ಭಿಕವಾಗಿ ಉಪಮೆ, ದೃಷ್ಟಾಂತ, ರೂಪಕ, ಪ್ರತಿಮೆಗಳ ರೂಪದಲ್ಲಿ ನಿಸರ್ಗ ಸಾವಯವ ಪರಿಕರಗಳನ್ನು ಬಳಸಿಕೊಂಡಿರುವುದು ವಚನಗಳ ಅಧ್ಯಯನದಿಂದ ತಿಳಿದುಬರುತ್ತದೆ. ಅಮೂರ್ತವಾಗಿರುವ ಅನುಭವವನ್ನು ಮೂರ್ತೀಕರಿಸಲು, ಅನುಭಾವವನ್ನು ಪರಿಣಾಮಕಾರಿಯಾಗಿ ಅರ್ಥೈಸಲು, ಅಭಿವ್ಯಕ್ತಿಗೆ ಖಚಿತವಾಗಿ ನಿದರ್ಶನ ನೀಡುವ ಮೂಲಕ ತಿಳಿಯಪಡಿಸಲು- ಹೀಗೆ ಹಲವು ಕಾರಣಗಳಿಗಾಗಿ ಪರಿಸರದ ಪರಕರಗಳನ್ನು ವಚನಕಾರರು ಬಳಸಿಕೊಂಡಿದ್ದರು.

ಅಕ್ಕಮಹಾದೇವಿ ಜನ್ಮಸ್ಥಳವಾದ ಶಿವಮೊಗ್ಗ ಜಿಲ್ಲೆಯ ಉಡುತಡಿಯ ಪರಿಸರ ಹಾಗೂ ಅವಳ ಬದುಕಿನ ಗಮ್ಯಸ್ಥಳವಾದ ಶ್ರೀಶೈಲದ (ಮಲ್ಲಿಕಾರ್ಜುನ) ಕದಳಿ ವನವು ಸಮೃದ್ಧ ಕಾಡನ್ನು ಹೊಂದಿದ್ದ ಜೈವಿಕ ತಾಣಗಳಾಗಿದ್ದವು. ಇತರೆ ವಚನಕಾರರಿಗೆ ಹೋಲಿಸಿದರೆ ಅಕ್ಕನ ನಿವೇದನೆಗಳಲ್ಲಿ ಪರಿಸರ ಸಂವೇದನೆಯು ಹುಲುಸಾಗಿದೆ ಮತ್ತು ಹಲವು ಆಯಾಮಗಳಲ್ಲಿ ಹರಡಿಕೊಂಡಿರುವುದನ್ನು ನೋಡುತ್ತೇವೆ.

ಅಕ್ಕನ ವಚನಗಳನ್ನು ಪರಿಸರ ಸ್ತ್ರೀವಾದಿ ತಾತ್ವಿಕ ನೆಲೆಯಲ್ಲಿ ಮುಂದುವರೆದು ವಿವೇಚಿಸಲಾಗಿದೆ. ಪರಿಸರ ಸ್ತ್ರೀವಾದ ಎಂಬುವುದು ಪರಿಸರ ಮತ್ತು ಮಹಿಳೆಗೆ ಇರುವ ಸಾಮ್ಯತೆ, ಸಮನ್ವಯ, ಪೋಷಣೆ ಹಾಗೂ ಸಮಸ್ಯೆ, ಸವಾಲು ಮತ್ತು ಸಂಕಟಗಳು ಒಂದೇ ಬಗೆಯಾಗಿರುವುದನ್ನು ನಿರೂಪಿಸುತ್ತದೆ. ಸಾಹಿತ್ಯ ಪಠ್ಯಗಳಲ್ಲಿ ನಿಸರ್ಗ ಮತ್ತು ಸ್ತ್ರೀ ನೆಲೆಯ ಏಕಮುಖಿಯಾದ ಸಂವೇದನೆಯನ್ನು ಒಂದೆಡೆಗೆ ತಂದು ವಿವೇಚಿಸುತ್ತದೆ. ಮಹಾದೇವಿಯಕ್ಕನ ರಚನೆಗಳನ್ನು ಪರಿಶೀಲಿಸಿದರೆ ೧.ಪರಿಸರ ಮತ್ತು ಮನುಷ್ಯ ಸಂಬಂಧ, ೨.ಸಸ್ಯಕೇಂದ್ರಿತ ಅಭಿವ್ಯಕ್ತಿ, ೩.ಪರಿಸರ ಅಲಂಕಾರ (ಉಪಮೆ, ದೃಷ್ಟಾಂತ, ರೂಪಕ ಮತ್ತು ಪ್ರತಿಮೆ) ೪.ಆದಿ-ಅನಾದಿ- ಸೃಷ್ಟಿಕ್ರಿಯೆಯ ವಿವೇಚನೆ ೫.ಸೂರ್ಯ ಮತ್ತು ಚಂದ್ರರ ದಾಖಲಾತಿ- ಮೊದಲಾದವು.

ಅಕ್ಕನ ವಚನಗಳಲ್ಲಿ ಅಭಿವ್ಯಕ್ತಿಗೊಂಡ ನಿಸರ್ಗವು ಪ್ರತ್ಯಕ್ಷ ನಿರೂಪಣೆಯಾಗಿರದೆ, ಪರೋಕ್ಷ ನಿರೂಪಣೆಯಾಗಿದೆ. ಅದು ಅನುದ್ದೇಶಿತ ಅಭಿವ್ಯಕ್ತಿಯ ಮಾದರಿಯನ್ನು ಹೋಲುತ್ತದೆ. ಅಂತಹ ಕಡೆಗಳಲ್ಲಿ ಪರಿಸರ ಮತ್ತು ಮನುಷ್ಯ ಸಂಬಂಧ ನೆಲೆಗಳು ದಾಖಲುಗೊಂಡಿವೆ. ಕನ್ನಡದ ಅನುಭಾವಿಕ ಲೋಕವು ಮಣ್ಣಿಂದ ಹುಟ್ಟಿಬಂದ ಕಾಯವು ಮಣ್ಣು ಸೇರುವುದು ಎಂದರೆ ಮತ್ತೆ ಪರಿಸರದ ಜೈವಿಕ ಚಕ್ರದ ಮೂಲಕ ನಿಸರ್ಗವನ್ನು ಸೇರುವುದೇ ಆಗಿದೆ.

"ಪೃಥ್ವಿ ಪೃಥ್ವಿಯ ಕೂಡದ ಮುನ್ನ/ ಅಪ್ಪು ಅಪ್ಪುವ ಕೂಡದ ಮುನ್ನ

ತೇಜ ತೇಜ ಕೂಡದ ಮುನ್ನ/ ವಾಯು ವಾಯುವ ಕೂಡದ ಮುನ್ನ

ಆಕಾಶ ಆಕಾಶದ ಕೂಡದ ಮುನ್ನ/ ಪಂಚೇಂದ್ರಿಯಂಗಳೆಲ್ಲ ಹಂಚುಹರಿಯಾಗದ ಮುನ್ನ

ಚೆನ್ನಮಲ್ಲಿಕಾರ್ಜುನನಗೆ ಶರಣೆನ್ನಿರೆ"(೧)

ಆರಾಧಿಸುವ ದೈವವನ್ನು ಕೂಡುವುದೆಂದರೆ ಅದು ಒಂದು ಬಗೆಯಲ್ಲಿ ಪರಿಸರದ ಪಂಚಭೂತಗಳಾದ ಜಲ, ವಾಯು, ಅಗ್ನಿ, ಆಕಾಶ, ಮಣ್ಣು(ಭೂಮಿ)- ಒಡನೆ ಸಮ್ಮಿಳಿತವಾಗುವುದು, ಲೀನವಾಗುವುದು ಎಂದಾಗಿದೆ. ಅಕ್ಕನ ಈ ಬಗೆಯ ನಿರೂಪಣೆಯಲ್ಲಿ ಅನುಭಾವ ಲೋಕ ಮತ್ತು ಜೈವಿಕ ವ್ಯವಸ್ಥೆಗಳನ್ನು ಸಮೀಕರಿಸಿ ಬಿಡುತ್ತಾಳೆ. ಅದನ್ನು ಪರಿಸರವಾದಿ ವಿಮರ್ಶಕರು 'ಪರಿಸರ ಅನುಭಾವ ಕಾವ್ಯ' ಎಂದು ಹೆಸರಿಸುತ್ತಾರೆ. ಅಂತಹ ಕಾವ್ಯದ ರಚನೆಯನ್ನು ಕುವೆಂಪರವರಲ್ಲೂ ನಾವು ಕಾಣುತ್ತೇವೆ.

"ಗಿರಿಯಲ್ಲಲ್ಲದೆ ಹುಲ್ಲುಮೊರಡಿಯಲ್ಲಾಡುವುದೆ ನವಿಲು? / ಕೊಳಕ್ಕಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ?ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ?/ ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ? ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗಲ್ಲದೆ/ ಅನ್ಯಕ್ಕೆಳಸುವುದೆ ಎನ್ನ ಮನ? ಪೇಳಿರೆ, ಕೆಳದಿಯರಿರಾ"(೨)

ಜೈವಿಕ ತಾಣಗಳಿಗೂ ನಿರ್ದಿಷ್ಟ ಪರಿಸರದ ಜೀವಿಗಳಿಗೂ ಸಾವಯವ ಸಂಬಂಧವಿರುತ್ತದೆ. ಈ ಬಗೆಯ ಸಾಮೀಪ್ಯ ಸಂಬಂಧವು ಜೀವಿಯ ಬದುಕನ್ನು ಪೋಷಿಸಲು, ಪೊರೆಯಲು ನೇರವಾಗಿರುತ್ತದೆ. ಗಿರಿ-ನವಿಲು, ಕೊಳ-ಹಂಸ, ಮಾಮರ-ಕೋಗಿಲೆ, ಪರಿಮಳ-ಭ್ರಮರ- ಈ ಮೊದಲಾದವುಗಳಲ್ಲಿರುವ ಸಂಬಂಧವು ಬಂಧುರತೆಯಿಂದ ಕೂಡಿರುತ್ತದೆ. ಪ್ರಕೃತಿಯಲ್ಲಿನ ಅವಿನಾಭಾವ ಸಂಬಂಧದಂತೆ ತನಗೂ ಮತ್ತು ಚೆನ್ನಮಲ್ಲಿಕಾರ್ಜುನಿಗೂ ಬಂಧುರತೆ ಇರುವುದರನ್ನು ಅಕ್ಕ ನಿರೂಪಿಸುತ್ತಾಳೆ. 'ಅನ್ನಕ್ಕೆಳಸುವುದು' ಎಂದರೆ ಪ್ರಕೃತಿಗೆ ವಿರುದ್ಧವಾದ ಅಸಹಜ ಸಂಬಂಧವನ್ನು ಬಯಸುವುದಾಗಿದೆ. ಮಹಾದೇವಿಯಕ್ಕ ಆ ಬಗೆಯ ಸಂಬಂಧವನ್ನು ನಿರಾಕರಿಸುತ್ತಾಳೆ. ಮಾನವರು 'ಪರಿಸರ ಕೇಂದ್ರ ಪ್ರಜ್ಞೆಯಿಂದ' ವರ್ತಿಸುವುದನ್ನಿಲ್ಲಿ ಗಮನಿಸುತ್ತೇವೆ.

"ಗಿರಿಯೊಳು, ವನದೊಳು ಗಿಡಗಿಡದತ್ತ/ ದೇವ, ಎನ್ನದೇವ ಬಾರಯ್ಯ

ತೋರಯ್ಯಾ ನಿಮ್ಮ ಕರಣವನೆಂದು/ ನಾನು ಅರಸುತ್ತ ಅಳಲುತ್ತ ಕಾಣದೆ

ಸುಯಿದು ಬಂದು ಕಂಡೆ/ ಶರಣರ ಸಂಗದಿಂದ ಅರಸಿ

ಹಿಡಿದಿಹನಿಂದು/ ನೀ ನಡಗುವ ಠಾವ ಹೇಳಾ ಚೆನ್ನಮಲ್ಲಿಕಾರ್ಜುನಾ?"(೩)

"ವನವೆಲ್ಲಾ ಕಲ್ಪತರು, ಗಿಡವೆಲ್ಲಾ ಮರುಜವಣಿ

ಶಿಲೆಗಳೆಲ್ಲಾ ಪರುಷ, ನೆಲವೆಲ್ಲಾ ಅವಿಮುಕ್ತಿಕ್ಷೇತ್ರ

ಜಲವೆಲ್ಲಾ ನಿರ್ಜರಾಮೃತ, ಮೃಗವೆಲ್ಲಾ ಪುರುಷಾಮೃಗ

ಎಡಹುವ ಹರಳೆಲ್ಲಾ ಚಿಂತಾಮಣಿ/

ಚೆನ್ನಮಲ್ಲಿಕಾರ್ಜುನಯ್ಯನ ನೆಚ್ಚಿನ ಗಿರಿಯ ಸುತ್ತಿ

ನೋಡುತ್ತ ಬಂದು/ ಕದಳಿಯ ಬನವ ಕಂಡೆ ನಾನು"(೪)

ಈ ಮೇಲಿನ ವಚನಗಳನ್ನು ಗಮನಿಸಿದರೆ ಪರಿಸರದ ಜೀವವ್ಯವಸ್ಥೆಯೊಳಗೆ ವೈವಿಧ್ಯಮಯ ಜೀವಗಳು ಪರಸ್ಪರ ಅವಲಂಬಿ ಆಗಿರುತ್ತವೆ. ಆ ಪರಿಯಲ್ಲಿಯೇ ಚೆನ್ನಮಲ್ಲಿಕಾರ್ಜುನ ಮತ್ತು ಮಹಾದೇವಿಯ ಅಕ್ಕ ತನ್ನ ಇರುವನ್ನು ಅರಹುತ್ತಾಳೆ. ಈ ಬಗೆಯ ಸಂಬಂಧ ಸಾವಯವ ರೂಪದ್ದು. ಅದನ್ನು ನಾವು 'ಅನುಭಾವಿ ಮತ್ತು ದೈವ'ದ ನಡುವಿನ ಸಾವಯವ ಸಂಬಂಧವೆಂದು ಹೆಸರಿಸಬಹುದು. ಪರಿಸರ-ದೈವಗಳು ಒಂದು ಬಿಂದುವಿನಲ್ಲಿ, ಜೀವಿಗಳು-ಅನುಭಾವಿ ಮತ್ತೊಂದು ಬಿಂದುವಿನಲ್ಲಿದ್ದರು- ಅವು ಸಹಜವಾಗಿ ಸಂಧಿಸುತ್ತವೆ. ಸರಳವಾಗಿ ಸಾವಯವ ಸಂಬಂಧವನ್ನು ಸಾಧ್ಯವಾಗಿಸುತ್ತವೆ. ಈ ರಚನೆಗಳಲ್ಲಿ ಅನುಭಾವಿಕ ನಿರೂಪಣೆಯು ಮೇಲ್ಪದರದಲ್ಲಿ ಕಾಣಿಸಿಕೊಂಡರು ಸಹ, ಅದರ ಆಳದಲ್ಲಿ, ಅದರ ತಳಪಾಯದ ಬೇರುಗಳು ಪರಿಸರ ವ್ಯವಸ್ಥೆಯಲ್ಲಿ ಹುದುಗಿರುವುದನ್ನು ಗಮನಿಸುತ್ತೇವೆ. ಗಿರಿ, ಗಿಡ, ಮರ, ನೆಲ, ಜಲ, ಶಿಲೆ, ಪುಷ್ಪ, ಪರಿಮಳ, ನವಿಲು, ಕೋಗಿಲೆ, ಹಂಸ- ಅವುಗಳ ನಡುವಿರುವ ಪರಿಸರ-ಜೀವಿಗಳ ಸೃಷ್ಟಿಶೀಲ ಸಂಬAಧದAತೆ ಅಕ್ಕಮಹಾದೇವಿ ಮತ್ತು ಚೆನ್ನಮಲ್ಲಿಕಾರ್ಜುನರ ಒಡನಾಟವಿರುವುದನ್ನು ದಾಖಲಿಸುತ್ತಾಳೆ.

ನಿಸರ್ಗದ ಮಧ್ಯದಲ್ಲಿದ್ದುಕೊಂಡು ಜೀವನ ಸಾಗಿಸುತ್ತಿದ್ದ ಮಾನವರು, ನಾಗರಿಕತೆ ಬೆಳೆದಂತೆ ಪರಿಸರದಿಂದ ದೂರವಾದು. ಅವರ 'ಸಮೂಹ ಪ್ರಜ್ಞೆಯು' ನೆಲಮೂಲದ್ದಾಗಿತ್ತು. ಸಾಮಾಜಿಕವಾಗಿ ಬಹಿಷ್ಕಾರಕ್ಕೆ ಒಳಗಾದ ಜೀವಗಳು ಕಾಡಿನ ಸರ್ವ ಜೀವಿಗಳಲ್ಲಿ ಸಹಾಯಕ್ಕಾಗಿ ಅಂಗಲಾಚುತ್ತವೆ. ರಾಮಾಯಣದಲ್ಲಿ ಸೀತೆಯನ್ನು ರಾಮನ ಆಜ್ಞೆಯಂತೆ ಕಾಡಿನಲ್ಲಿ ಲಕ್ಷ್ಮಣನು ಒಂಟಿಯಾಗಿ ಬಿಟ್ಟುಬಂದಾಗ, ಅವಳು ಪ್ರಕೃತಿಯ

ಪಂಚಭೂತಗಳು, ಕಾಡಿನ ಸಕಲ ಜೀವರಾಶಿಗಳಲ್ಲಿ ರಕ್ಷಣೆಗೆ ಮೊರೆಯಿಡುತ್ತಾಳೆ. ಅಕ್ಕಮಹಾದೇವಿ ಕೂಡ ಸಾಮಾಜಿಕ ಬಹಿಷ್ಕಾರಗಳನ್ನು ಎದುರಿಸಲು, ನಿಸರ್ಗದ ಪಕ್ಷಿ, ಪ್ರಾಣಿ, ಸಸ್ಯಗಳಲ್ಲಿ ಚೆನ್ನಮಲ್ಲಿಕಾರ್ಜುನನ ಸಂಧಿಸುವಲ್ಲಿ ಸಹಾಯ ಮಾಡುವಂತೆ ಕೋರಿಕೊಳ್ಳುತ್ತಾಳೆ. ಅವಳು ವಿನಂತಿಸುವುದು ಗಿಳಿ, ಕೋಗಿಲೆ, ಹಂಸ, ನವಿಲುಗಳಂತಹ ಮಾರ್ಗಕಾವ್ಯದಲ್ಲಿ ಕಾಣಿಸುವ ಹಕ್ಕಿಗಳಿಗೆ ಎನ್ನುವುದು ವಿಶೇಷ.

"ಚಿಲಿಮಿಲಿ ಎಂದು ಓದುವ ಗಿಳಿಗಳಿರಾ/ ನೀವು ಕಾಣಿರೆ, ನೀವು ಕಾಣಿರೆ

ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ/ ನೀವು ಕಾಣಿರೆ, ನೀವು ಕಾಣಿರೆ

ಎರಗಿ ಬಂದಾಡುವ ತುಂಬಿಗಳಿರಾ/ ನೀವು ಕಾಣಿರೆ, ನೀವು ಕಾಣಿರೆ

ಕೊಳನ ತಡಿಯೊಳಗಾಡುವ ಹಂಸೆಗಳಿರಾ/ ನೀವು ಕಾಣಿರೆ, ನೀವು ಕಾಣಿರೆ

ಗಿರಿಗಹ್ವರದೊಳಗಾಡುವ ನವಿಲುಗಳಿರಾ/ ನೀವು ಕಾಣಿರೆ, ನೀವು ಕಾಣಿರೆ

ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ"(೫)

"ಅಳಿಸಂಕುಲವೆ, ಮಾಮರವೆ/ ಬೆಳದಿಂಗಳೆ, ಕೋಗಿಲೆಯೆ

ನಿಮ್ಮನೆಲ್ಲರನೂ ಒಂದು ಬೇಡುವೆನು/

ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವ ಕಂಡರೆ

ಕರೆದು ತೋರಿರೆ"(೬)

"ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ/

ಹಲವು ಪ್ರಾಣಿಯ ಕೊಂದು, ನಲಿನಲಿದಾಡುವ

ತನ್ನ ಮನೆಯಲೊಂದು ಶಿಶು ಸತ್ತಡೆ/

ಅದಕ್ಕೆ ಮರಗುವಂತೆ ಅವಕೇಕೆ ಮರುಗ?

....................................

ಜೀವಹಿಂಸೆ ಮಾಡುವ ಮಾದಿಗರನೇನೆಂಬೆನಯ್ಯ?(೭)

ಅಕ್ಕಮಹಾದೇವಿ ತನ್ನ ಮಲ್ಲಿಕಾರ್ಜುನನ್ನು ಸೇರಲು ಬಯಕೆಗೆ ಸಹಾಯಕ್ಕಾಗಿ ಸಸ್ಯಹಾರಿ ಜೀವಿಗಳಿಗೆ ಮೊರೆಯಿಡುತ್ತಾಳೆ. ಆದರೆ ಹುಲಿ, ಚಿರತೆ, ನರಿ, ತೋಳದಂತಹ ಮೃಗಗಳಲ್ಲಿ ಅವಳಿಗೆ

ನಂಬಿಕೆಯಿಲ್ಲ. ಜೊತೆಗೆ ಜೀವ ಹಿಂಸೆಯಲ್ಲಿ ತೊಡಗುವ ಬೇಟೆಗಾರನು, ತನ್ನದೇ ಮಗನ ಸಾವನ್ನು ಸಹಿಸಲಾರನು. ಅಂತಹ 'ದಯವೇ ಧರ್ಮದ ಮೂಲವಯ್ಯ' ಎನ್ನುವ ಆಶಯವು ಪರೋಕ್ಷವಾಗಿ ಅಕ್ಕನ ವಚನಗಳಲ್ಲಿ ಧ್ವನಿತವಾಗುತ್ತದೆ. ಆಧುನಿಕೋತ್ತರ ನಗರ ಜೀವನ ಶೈಲಿಯಲ್ಲಿ ಗಿಳಿ, ಪಾರಿವಾಳ, ಬಣ್ಣದ ಹಕ್ಕಿ, ಇಂಚರ ಹಕ್ಕಿ, ನಾಯಿ, ಬೆಕ್ಕು, ಮೀನು -ಗಳನ್ನು ಮನೆಯಲ್ಲಿ ಸಾಕುವ ಮನೋಭಾವದ ಹಿಂದೆ, ಮನುಷ್ಯರು ಮನುಷ್ಯ ಪ್ರೀತಿಯಿಂದ ವಂಚಿತವಾದಾಗ, ಪ್ರಾಣಿಪ್ರೀತಿಯತ್ತ ಹೊರಳುತ್ತಿರುವ ಚಿತ್ರಣಗಳು ಸಮಗೆ ಸಮಕಾಲೀನ ಜೀವನಕ್ರಮದಲ್ಲಿ ಕಾಣಸಿಗುತ್ತವೆ. ಅಂತಹ ಮಾದರಿಯೊಂದು ಅಕ್ಕನ ವಚನಗಳಲ್ಲಿ ಬಹು ಹಿಂದೆಯೇ ದಾಖಲಿಸಿರುವುದನ್ನು ನಾವಿಲ್ಲಿ ನೆನೆಯಬಹುದಾಗಿದೆ.

ಜೀವ ವ್ಯವಸ್ಥೆಯಲ್ಲಿ ಪ್ರಾಣಿಲೋಕ ಮತ್ತು ಸಸ್ಯಲೋಕಗಳೆಂದು ವಿಭಾಗಿಸುತ್ತೇವೆ. ಪ್ರಾಣಿಲೋಕಕ್ಕೆ ಸೇರಿದ ಮಾನವರು ಸಸ್ಯಗಳನ್ನು ಆಹಾರಕ್ಕಾಗಿ ಜೊತೆಗೆ ಇತರೆ ಕಾರಣಗಳಿಗಾಗಿ ಅವಲಂಬಿಸಿದ್ದಾರೆ. ಅನುಭಾವದ ಅನುಭವಗಳನ್ನು ನಿರ್ವಚಿಸುವುದರಲ್ಲಿ ಅಕ್ಕಮಹಾದೇವಿ ಸಸ್ಯಪ್ರಪಂಚದ ತಿಳುವಳಿಕೆಯನ್ನು ನಿರೂಪಿಸುತ್ತಾಳೆ. ಸಂಭಂದಾಂತರದ ಕಾರಣದಿಂದ ಸಸ್ಯಗಳು ಭೂಮಿಯ ಹಲವು ಅಂಶಗಳನ್ನು ಒಳಗೊಂಡಿದೆ.

"ಇಳೆ ನಿಂಬೆ ಮಾವು ಮಾದಲಿಕೆ/ ಹುಳಿ ನೀರನೆರೆದವರಾರಯ್ಯ?

ಕಬ್ಬು ಬಾಳೆ ಹಲಸು ನಾರಿವಾಳಕ್ಕೆ/ ಸಿಹಿ ನೀರನೆರೆದವರಾರಯ್ಯ?

ಕಳವೆ ರಾಜಾನ್ನ ಶಾಲ್ಯನ್ನಕ್ಕೆ/ ಓಗರದ ಉದಕವನೆರೆದವರಾರಯ್ಯ?

ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ/ ಪರಿಮಳದುದಕವನೆರೆದವರಾರಯ್ಯ?

ಇಂತೀ ಜಲವು ಒಂದೆ/ ನೆಲನು ಒಂದೆ, ಆಕಾಶ ಒಂದೆ/ ಜಲವು ಹಲವು ದ್ರವ್ಯಂಗಳ ಕೂಡಿ/

ತನ್ನ ಪರಿ ಬೇರಾಗಿಹ ಹಾಗೆ/ ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು

ಹಲವು ಜನಂಗಳ ಕೂಡಿಕೊಂಡಿರ್ದಡೇನು?" (೮)

"ಕುಲಗಿರಿಯ ಶಿಖರದ ಮೇಲೆ/ ಬಾಳೆ ಬೆಳೆವುದಯ್ಯ ಎಂದಡೆ/ ಬಾಳೆ ಬೆಳೆವುದಯ್ಯ ಎನಬೇಕು

ಓರೆಗಲ್ಲ ನುಗ್ಗುಗುಟ್ಟಿ ಮೆಲಬಹುದಯ್ಯ ಎಂದಡೆ/ ಅದು ಅತ್ಯಂತ ಮೃದು ಮೆಲಬಹುದಯ್ಯ ಎನಬೇಕು/

ಸಿಕ್ಕದ ಠಾವಿನಲ್ಲಿ ಉಚಿತವ ನುಡಿವುದೆ ಕಾರಣ/ಚೆನ್ನಮಲ್ಲಿಕಾರ್ಜುನಯ್ಯ/ಮರ್ತ್ಯಕ್ಕೆ ಬಂದುದಕ್ಕಿದೆ ಗೆಲವು(೯)

"ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ? / ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?

ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ?/ ರೂಪವಿದ್ದು ಫಲವೇನು ಬಾನವಿಲ್ಲದನ್ನಕ್ಕ?

ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ/ ಚೆನ್ನಮಲ್ಲಿಕಾರ್ಜುನಾ"(೧೦)

"ವನವೆಲ್ಲಾ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ

ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ/ ಚೆನ್ನಮಲ್ಲಿಕಾರ್ಜುನಾ/ ಸರ್ವಭರಿತನಾಗಿ

ಎನಗೇಕೆ ಮುಖದೋರೆ?(೧೧)

ಈ ಮೇಲಿನ ವಚನಗಳಲ್ಲಿ ಸಸ್ಯಪರಿಸರ ಲೋಕದ ಬಗೆಗಿನ ತಿಳುವಳಿಕೆಯನ್ನು ಮಹಾದೇವಿಯಕ್ಕ ಅನುಭಾವದ ಅಭಿವ್ಯಕ್ತಿಗೆ ಮಾಧ್ಯಮವನ್ನಾಗಿ ಬಳಸಿಕೊಂಡಿದ್ದಾಳೆ. ನೆಲ-ಜಲದೊಂದಿಗಿನ ಸಸ್ಯಗಳ ಸಂಬAಧAತೆಯೇ ಅಕ್ಕ ಮತ್ತು ಮಲ್ಲಿಕಾರ್ಜುನರ ನಡುವಿನ ಸಂಬಂಧವು ಅವಿನಾಭಾವಮಯವಾದುದು. 'ಇಳೆ ನಿಂಬೆ ಮಾವು ಮಾದಲಿಕೆ...' ವಚನವು ಸಸ್ಯಗಳು ಮತ್ತು ನೆಲ-ಜಲದೊಂದಿಗೆ ಸಾಧ್ಯವಾಗಿರುವ ಜೀವಂತಿಕೆಯ ಹಿಂದೆ 'ಕಾಣದ ಶಕ್ತಿಯೇ ಕಾರಣ'. ಅದು ಎಲ್ಲೆಲ್ಲೋ ಇರುವ ದೇವರೇ ಆ ವಿಸ್ಮಯಕ್ಕೆ ಕಾರಣಿಕರ್ತನು ಎನ್ನುತ್ತಾಳೆ ಮುಹಾದೇವಿಯಕ್ಕ. 'ಕುಲಗಿರಿಯ ಶಿಖರದ ಮೇಲೆ/ ಬಾಳೆ ಬೆಳೆವುದಯ್ಯ...' ವಚನದಲ್ಲಿ ಪರಿಸರ ವ್ಯವಸ್ಥೆಯಲ್ಲಿ ನಿರ್ದಿಷ್ಟ ಸಸ್ಯ, ನಿರ್ದಿಷ್ಟವಾದ ಪರಿಸರದಲ್ಲಿ ಬೆಳೆಯುವಂತೆ ಭಕ್ತ ಮತ್ತು ದೈವದ ಸಂಬAಧದಲ್ಲಿ ವಾದಕರ ಜೊತೆಗೆ ಪ್ರತಿವಾದವನ್ನು ಹುಡುವುದರಲ್ಲಿ ಅರ್ಥವಿಲ್ಲ ಎನ್ನುತ್ತಾಳೆ ಅಕ್ಕ. 'ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ?...' ವಚನವು ಪ್ರತಿ ಜೀವಿಯು ಫಲೋತ್ಪತ್ತಿಯನ್ನು ಮಾಡಬೇಕು. ಹಾಗಿಲ್ಲದೆ ಹೋದರೆ ಅದು ನಿರರ್ಥ ಎನಿಸುತ್ತದೆ. ಈ ಮಾತಿಗೆ ಭಕ್ತನಾದವನಿಗೆ ಅನುಭಾವದ ಜ್ಞಾನಮೀಮಾಂಸೆಯ ಅರಿವು ಇರಬೇಕೆಂದು ಅಕ್ಕ ಹೇಳುತ್ತಾಳೆ. 'ವನವೆಲ್ಲಾ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ...' ವಚನದಲ್ಲಿ ದೈವ ಮತ್ತು ನಿಸರ್ಗವನ್ನು ಸಮೀಕರಿಸಲಾಗಿದೆ. ಹೀಗೆ ಪರಿಸರವು ಭೂಮಾತೀತ, ಭವ್ಯಾತೀತವಾಗುವ ಅನಂತತೆಯು ದೈವಿಕ ರೂಪವಾಗಿದೆ ಎಂಬುವುದನ್ನು ಅಕ್ಕ ಮಹಾದೇವಿ ತಿಳಿಸುತ್ತಾಳೆ. ಪರಿಸರವಾದವು ಅನುಭಾವ ಮತ್ತು ಪರಿಸರಗಳು ಒಟ್ಟಾಗಿರುವ ಸಾಹಿತ್ಯ ಕಥನವನ್ನು 'ಎಕೋ ಮಿಸ್ಟಿಸಿಜಮ್' ಎಂದು ಹೆಸರಿಸುತ್ತವೆ. ಈ ಪರಿಭಾಷೆಯ ನೆಲೆಯಲ್ಲಿ ಅಕ್ಕನ ವಚನಗಳನ್ನು ವಿಶ್ಲೇಷಿಸುವಾಗ 'ಎಕೋ ಫೆಮಿನಿಜಮ್' ಸಂವೇದನೆಯು ಪ್ರಧಾನವಾಗಿ ನಿವೇದನೆಗೊಂಡಿರುವುದನ್ನು ಕಾಣುತ್ತೇವೆ.

ಪಶ್ಚಿಮ ಘಟ್ಟಸ ಸಹ್ಯಾದ್ರಿ ಪರಿಸರದ ಉಡುತಡೆಯಲ್ಲಿ ಹುಟ್ಟಿ ಬೆಳೆದ ಅಕ್ಕಮಹಾದೇವಿಗೆ ಸಹಜವಾಗಿಯೇ ನಿಸರ್ಗದ ಅನುಭವಲೋಕ ಸಾಧ್ಯವಾಗಿತ್ತು. ಅವಳ ವಚನಗಳನ್ನು ಸೂಕ್ಷ್ಮಂ್ಮವಾಗಿ ಗಮನಿಸಿದರೆ ಪ್ರಾಣಿಲೋಕಕ್ಕಿಂತ ಸಸ್ಯಲೋಕದ ನಿರೂಪಣೆ, ನಿವೇದನೆ, ಮತ್ತು ಚಿತ್ರಣಗಳು ಹುಲುಸಾಗಿರುವುದನ್ನು ಕಾಣುತ್ತೇವೆ. ಹಲವು ಕಡೆಗಳಲ್ಲಿ ಪರಿಸರದ ಅನಂತ ಸಂಗತಿಗಳು, ಅವಳ

ವಚನಗಳಲ್ಲಿ ನಿಸರ್ಗವು ಉಪಮೆ, ದೃಷ್ಟಾಂತ, ರೂಪಕ ಮತ್ತು ಪ್ರತಿಮೆಗಳಾಗಿ ಬಳಕೆಗೊಂಡಿದೆ. ಪರಿಸರವಾದಿ ವಿಮರ್ಶೆಯು 'ಎಕೋ ರೇಟೋರಿಕ್'(ಪರಿಸರ ಅಲಂಕಾರ) ಎಂದು ಹೆಸರಿಸುತ್ತದೆ. ಅಮೂರ್ತ ಅನುಭಾವಿಕ ಲೋಕವನ್ನು ವಿವರಿಸಲು ಮೂರ್ತರೂಪದ ನೈಸರ್ಗಿಕ ಸಂಗತಿಗಳನ್ನು ಅಕ್ಕಮಹಾದೇವಿಯು ದಾಖಲಿಸುತ್ತಾಳೆ.

"ಕದಳಿ ಎಂಬುದು ತನು, ಕದಳಿ ಎಂಬುದು ಮನ/ ಕದಳಿ ಎಂಬುದು ವಿಷಯಂಗಳ/

ಕದಳಿ ಎಂಬುದು ಭವ್ಯ ಘೋರಾರಣ್ಯ/ ಈ ಕದಳಿ ಎಂಬುದ ಗೆದ್ದ ತವೆ ಬದುಕಿ ಬಂದು/

ಕದಳಿ ಬನದಲ್ಲಿ ಭವಹರನ ಕಂಡೆನು/ ಭವ ಗೆದ್ದು ಬಂದ ಮಗಳೆಂದು

ಕರುಣದಿ ತೆಗೆದು ಬಿದಿದಪ್ಪಿದೆಡೆ/ ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು(೧೨)

"ಜಲದ ಮಂಟಪದ ಮೇಲೆ, ಪುಷ್ಪ, ಕುಸುಮ- ಪರಿಮಳ,

ಸುವಾಸನೆ, ನೀರಕ್ಷೀರ, ಫಲದ ಮರೆಯ ರುಚಿಯಂತೆ/

ಮರದ ಮರೆಯ ತೇಜದಂತೆ, ಕ್ಷೀರ"

"ಫಲ ಒಳಗೆ ಪಕ್ವವಾಗಿಯಲ್ಲದೆ/ ಹೊರಗೆ ಸಿಪ್ಪೆ ಒಪ್ಪಗೆಡದು" (೧೩)

"ಬೆಟ್ಟದ ಮೇಲೊಂದು ಮನೆಯ ಮಾಡಿ/ಮೃಗಗಳಿಗಂಜಿಡೆAತಯ್ಯ?

ಸಮುದ್ರದ ತಡಿಯಲ್ಲೊಂದು ಮನೆಯ ಮಾಡಿ/ ನೊರೆ ತೆರೆಗಳಿಗಂಜಿದಡೆಂತಯ್ಯ?

ಸAತೆಯೊಳಗೊAದು ಮನೆಯ ಮಾಡಿ/ ಶಬ್ದಕ್ಕೆ ಅಂಜಿದಡೆಂತಯ್ಯ?

ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ/ ಲೋಕದೊಳಗೆ ಹುಟ್ಟಿದ ಬಳಿಗೆ

ಸ್ತುತಿನಿಂದೆಗಳು ಬಂದಡೆ/ ಮನದಲ್ಲಿ ಕೋಪತಾಳದೆ

ಸಮಾಧಾನಿಯಾಗಿರಬೇಕು"(೧೪)

"ಹಿಂಡನಗಲಿ ಹಿಡಿವಡೆದು ಕುಂಜರ/ ತನ್ನ ವಿಂಧ್ಯದ ನೆನೆವಂತೆ ನೆನೆವೆನಯ್ಯಾ

ಬಂಧನಕ್ಕೆ ಬಂದ ಗಿಳಿ/ ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ

ಕಂದಾ ನೀನಿತ್ತ ಬಾ ಎಂದು

ನೀವು ನಿಮ್ಮಂದವ ತೋರಯ್ಯಾ/ ಚೆನ್ನಮಲ್ಲಿಕಾರ್ಜುನಾ"(೧೫)

ಶ್ರೀಶೈಲ ಗಿರಿಯಲಿ ಕದಳಿ ಎನ್ನುವ ವನವಿದೆ. 'ಕದಳಿ ಎಂಬುದು ಭವ್ಯ ಘೋರಾರಣ್ಯ' ಎನ್ನುವ ವಚನಕಾರ್ತಿಯು ಕದಳಿಯನ್ನು ಬೇರೆ ಬೇರೆ ವಸ್ತುಗಳಿಗೆ ರೂಪಕವನ್ನಾಗಿ ನಿರೂಪಿಸುತ್ತಾಳೆ. ಕದಳಿ ಎನ್ನುವ ರೂಪಕವು ಹಲವು ಬಗೆಯಲ್ಲಿ ಬರುವುದರಿಂದ, ಅದನ್ನು ಮಾಲಾಲಂಕಾರವೆAದು ಗುರುತಿಸಬಹುದು. 'ಕದಳಿ' ವನವಾಗಿ, 'ಕದಳಿ' ತನುವಾಗಿ, 'ಕದಳಿ' ಮನವಾಗಿ ವಿವಿಧ ರೂಪಕಗಳಲ್ಲಿ ಅಕ್ಕನ ವಚನಗಳಲ್ಲಿ ಮೈದಾಳಿದೆ. 'ಬೆಟ್ಟದ ಮೇಲೊಂದು ಮನೆಯ ಮಾಡಿ' ವಚನದಲ್ಲಿ ಅಕ್ಕ ಮಹಾದೇವಿಯು ಅನೇಕ ಬಗೆಯ ದೃಷ್ಟಾಂತಗಳನ್ನು ಬಳಸಿಕೊಳ್ಳುತ್ತಾಳೆ. ಬೆಟ್ಟ-ಕಾಡುಮೃಗ, ಸಮುದ್ರ-ನೆರೆ ತೊರೆ, ಸಂತೆ- ಶಬ್ದ, ಸದ್ದು ಗದ್ದಲ: ಈ ಮೊದಲಾದ ದೃಷ್ಟಾಂತಗಳ ಮೂಲಕವಾಗಿ ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದನೆಗೆ ಗುರಿಯಾಗುವದು ಅನಿವಾರ್ಯವೆನಿಸುತ್ತದೆ. ಇಲ್ಲಿ ಅಕ್ಕಮಹಾದೇವಿ ದೃಷ್ಟಾಂತಕ್ಕೆ ಬಳಸಿಕೊಂಡ ಶಬ್ದ-ಅರ್ಥ ಪರಿಕರಗಳು ಪರಿಸರ ಕೇಂದ್ರಿತವಾಗಿರುವುದು ಕುತೂಹಲವೆನಿಸುತ್ತದೆ. ಹಲವು ದೃಷ್ಟಾಂತಗಳನ್ನು ಬಳಸಿಕೊಂಡರು, ಅವುಗಳು ಚನ್ನಮಲ್ಲಿಕಾರ್ಜುನನಲ್ಲಿ ಲೀನವಾಗುವುದರ ಮೂಲಕ ಹೊಸ ಅರ್ಥವನ್ನು ಪಡೆಯುತ್ತವೆ. 'ಮರಮರ ಮಥಿಸಿ ಕಿಚ್ಚು ಹುಟ್ಟಿ/ ಸುತ್ತಣ ತರುಮರಾದಿಗಳ ಸುಡಲಾಯಿತ್ತು'(೧೬) 'ಹೂವು ಕಂದಿದಲ್ಲಿ ಪರಿಮಳವನರಸುವರೆ? ಕಂದನಲ್ಲಿ ಕುಂದನರಸುವರೆ?'(೧೭) ಇಲ್ಲಿನ ಸಾಲುಗಳು ನಿಸರ್ಗದ ಕ್ರಿಯೆಯಿಂದ ಉಂಟಾಗುವ ಅಗ್ನಿಅವಘಡ ಮತ್ತು ಸೃಷ್ಟಿಕ್ರಿಯೆಯ ಸಹಜವಾದ ಹೂ ಅರಳುವಿಕೆಯನ್ನು ವಚನಕಾರ್ತಿಯು ದಾಖಲಿಸುತ್ತಾಳೆ. ಅವುಗಳ ಬಳಕೆಯಲ್ಲಿ ದೃಷ್ಟಾಂತ ಅಲಂಕಾರ ಪ್ರಧಾನವಾಗಿದೆ.

ಇಂದಿಗೂ ಭೂ ಉಗಮದ ಸಿದ್ಧಾಂತಗಳು ವಿಜ್ಞಾನಿಗಳಿಗೆ ಕುತೂಹಲದ ವಿಷಯವಾಗಿಯೇ ಉಳಿದಿದೆ. ಭೂಮಿ ಮೇಲಿನ ಜಲಜನಕದ ವಿಧಳನ ಕ್ರಿಯೆಯಿಂದ ಭೂಮಿ ಹುಟ್ಟಿತು ಎನ್ನುವ ಶೋಧ ವಾದಗಳೇ ಬಲವಾಗಿವೆ. ಜಲಜನಕ ಮತ್ತು ಆಮ್ಲಜನಕಗಳ ಮಿಶ್ರಣದಿಂದ ನೀರು ಉತ್ಪತ್ತಿಯಾಯಿತು. ಪರಿಸರ ವ್ಯವಸ್ಥೆಯಲ್ಲಿ 'ಜಲ' ಎನ್ನುವುದು ಹಲವು ಬಗೆಯ ಸೃಷ್ಟಿಗಳಿಗೆ ವಿಸ್ಮಯಕಾರಿ ಆಗಿರುವುದನ್ನು ಅಕ್ಕ ಗುರುತಿಸುತ್ತಾಳೆ. ಅದಕ್ಕೆ ಕೆಳಗಿನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

"ಮುತ್ತು ನೀರಲಾಯಿತ್ತು/ ವಾರಿಕಲ್ಲು ನೀರಲಾಯಿತ್ತು

ಉಪ್ಪು ನೀರಲಾಯಿತ್ತು/ ಉಪ್ಪುಕರಗಿತ್ತು, ವಾರಿಕಲ್ಲು ಕರಗಿತ್ತು

ಮುತ್ತು ಕರಗಿದುದನಾರೂ ಕಂಡವರಿಲ್ಲ

ಈ ಸಂಸಾರಿ ಮಾನವರು ಲಿಂಗವ ಮುಟ್ಟಿ/ ಭವಭಾರಿಗಳಾದರು

ನಾ ನಿನ್ನ ಮುಟ್ಟಿ ಕರಿಗೊಂಡೆನಯ್ಯಾ/ ಚೆನ್ನಮಲ್ಲಿಕಾರ್ಜುನ"(೧೮)

ಆದಿ-ಅನಾದಿ ಸೃಷ್ಟಿ ಉಗಮದ ರಹಸ್ಯದ ಒಗಟು ಬಿಡಿಸುವ ಪರಿಯನ್ನು ಮೇಲಿನ ರಚನೆಯಲ್ಲಿ ಕಾಣುತ್ತೇವೆ. ಉಪ್ಪು, ವಾರಿಕಲ್ಲು ನೀರಿನಿಂದಲೇ ಹುಟ್ಟಿ, ಅದೇ ನೀರಿನ ಸ್ಪರ್ಶದಿಂದ ಕರಗುತ್ತವೆ. ಆದರೆ ನೀರಿನಲ್ಲಿ ಹುಟ್ಟುವ ಮುತ್ತು ನೀರಲ್ಲಿ ಕರಗದಿರುವ ಸೋಜಿಗವನ್ನು ನಿರ್ವಚಿಸುತ್ತಾಳೆ ಮಹಾದೇವಿಯಕ್ಕ. 'ಜಲದೊಳಗೆ ಹುಟ್ಟಿ', 'ವಟವೃಕ್ಷದೊಳಡಗಿದ ಸಮರಸದ ಬೀಜ'- ನಿಸರ್ಗವು ಮಾನವನ ಕಲ್ಪನೆಗಳಿಗೂ ಮಿಗಿಲಾದ ಸೃಷ್ಟಿಯದ್ಭುತಗಳನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಭಕ್ತ ಮತ್ತು ದೈವ ಸಂಬಂಧವು ಕೂಡ ನಿಸರ್ಗದಲ್ಲಿನ ಬಹು ಆಕೃತಿಯನ್ನು ಹೋಲುತ್ತವೆ. ಹೀಗೆ ಪರಿಸರ ಮೀಮಾಂಸೆಯ ಮೂಲಕವಾಗಿ ಆನುಭಾವಿಕ ಲೋಕದ ಅರಿವನ್ನು ಹರವುಗೊಳಿಸುವ ಅಕ್ಕನ ವಚನಗಳ ರಚನಾ ಕ್ರಮ ವಿಶಿಷ್ಟವಾದುದು. ವಚನಕಾರರು 'ಜಲ'ವನ್ನು ಸೃಷ್ಟಿಕ್ರಿಯೆಯ ಮೂಲವೆಂದು ಗುರುತಿಸಿದ್ದರು. ಹಾಗೆಯೇ 'ಭಕ್ತಿ'ಗೆ ಮನಸಿನ ಆಚಾರವು ಮೂಲವೆನ್ನುವುದನ್ನು ನಿದರ್ಶಾತ್ಮಕವಾಗಿ ಹೇಳುವುದನ್ನು ಮರೆಯುವುದಿಲ್ಲ.

ಬ್ರಹ್ಮಾಂಡದಲ್ಲಿ ಸೂರ್ಯ ಎಂಬುವ ನಕ್ಷತ್ರ, ಚಂದ್ರ ಎನ್ನುವ ಭೂಮಿಯ ಉಪಗ್ರಹವಾದರೂ, ಅವುಗಳಿಗೆ ಸಮಾನ ಮಹತ್ವವನ್ನು ನಮ್ಮ ಆನುಭಾವಿಕ ಚಿಂತಕರು ನೀಡಿದ್ದಾರೆ. 'ಬಲ್ಲವರೆ ಬಲ್ಲರು ಬೆಲ್ಲದ ರುಚಿ' ಎಂಬAತೆ ಗಗನಕ್ಕೆ ಚಂದ್ರ, ನದಿಗೆ ತಾವರೆ, ಪುಷ್ಪಕ್ಕೆ ಪರಿಮಳ- ಅವುಗಳ ಮಹತ್ತರ ಸಾಂಗತ್ಯವನ್ನು ಬಲ್ಲವಾಗಿರುತ್ತವೆ. ಚಂದ್ರಮನಿಗೆ ಹದ್ದು, ನದಿಗೆ ಹೊನ್ನಾರಿಕೆ, ಪುಷ್ಪವನು ನೊರಜು- ಅರಿಯಲಾರದು. ಅದರಂತೆ ಅಕ್ಕ ಮತ್ತು ಚೆನ್ನಮಲ್ಲಿಕಾರ್ಜುನನ ಸಾಂಗತ್ಯವಿದೆ ಎನ್ನುವ ಅರಿವನ್ನು ಈ ಕೆಳಗಿನ ವಚನ ನಿರ್ವಚಿಸುತ್ತದೆ.

"ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ/ ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯ?

ನದಿಯ ಗುಂಪ ತಾವರೆ ಬಲ್ಲುದಲ್ಲದೆ? ಕಡೆಯಲಿದ್ದ ಹೊನ್ನಾರಿಕೆ ಬಲ್ಲುದೆ ಅಯ್ಯಾ?

ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ/ ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ?

ಚೆನ್ನಮಲ್ಲಿಕಾರ್ಜುನಯ್ಯಾ/ ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ/

ಈ ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯ"(೧೯)

"ದೃಶ್ಯವಾದ ರವಿಯ ಬೆಳಗು ಆಕಾಶದ ವಿಸ್ತೀರ್ಣ

ವಾಯುವಿನ ಚಲನೆ, ತರುಗುಲ್ಮ ಲತಾದಿಗಳಲ್ಲಿಯ

ತಳಿರು ಪುಷ್ಪ ಷಡುವಣಂಗಳೆಲ್ಲ ಹಗಲಿನ ಪೂಜೆ

ಚಂದ್ರ ಆಕಾಶ ನಕ್ಷತ್ರ ಅಗ್ನಿ ವಿದ್ಯತ್ತಾದಿಗಳು

ದೀಪ್ತಮಯವೆನಿಸಿಪ್ಪವೆಲ್ಲ ಇರುಳಿನ ಪೂಜೆ

ಹಗಲಿರುಳು ನಿನ್ನ ಪೂಜೆಯಲ್ಲಿ

ಎನ್ನ ಮರೆದಿಪ್ಪೆನಯ್ಯಾ ಚೆನ್ನಮಲ್ಲಿಕಾರ್ಜುನಾ"(೨೦)

ಈ ಮೇಲಿನ ವಚನವು ಲೌಕಿಕದ ಪೂಜಾ ಸ್ಥಾನದಲ್ಲಿ ಒಟ್ಟು ಪರಿಸರ ವ್ಯವಸ್ಥೆಯ ಅಂಶಗಳನ್ನು ದೀಪ, ಬೆಳಗು, ಧೂಪ, ಅಗ್ನಿ, ತಳಿರು, ಪುಷ್ಪಗಳನ್ನು ಸೂಚಿಸುತ್ತದೆ. ಕೃತಕ ಪೂಜೆಗಿಂತ, ನಿಸರ್ಗದ ಚರಾಚರಗಳು ಪೂಜಾ ಸಾಮಗ್ರಿಗಳಾಗುವ ಅದ್ಭುತವನ್ನು ಅಕ್ಕನ ವಚನವು ತೆರೆದಿಡುತ್ತದೆ. ಕುವೆಂಪುರವರ 'ಪೂಜಾ' ಕವಿತೆಯಲ್ಲೂ ನಿಸರ್ಗದ ಕ್ರಿಯೆ ಅಥವಾ ಸಂಗತಿಗಳನ್ನು ಪೂಜಾ ಸಾಮಗ್ರಿಯಾಗಿ ನಿರೂಪಿಸುವುದನ್ನು ನಾವಿಲ್ಲಿ ನೆನೆಯಬಹುದು. ಮಾಲಿನ್ಯಕಾರಕ ಪೂಜಾ ವಿಧಾನಕ್ಕಿಂತ, ಮಾಲಿನ್ಯ ರಹಿತವಾದ ನಿಸರ್ಗದ ಪೂಜೆಯು ಹೆಚ್ಚು ಆದರ್ಶನೀಯವಾದುದು. ಒಟ್ಟಿನಲ್ಲಿ ಪ್ರಮುಖ ವಚನಕಾರಿಗೆ ಹೋಲಿಸಿದರೆ ಅಕ್ಕ ಮಹಾದೇವಿಯ ವಚನಗಳಲ್ಲಿ 'ಪರಿಸರ ಸಂವೇದನೆಯು ಹಲವು ಬಣ್ಣಗಳಿಂದ ಕೂಡಿದೆ.' ಅಮೂರ್ತ ಅನುಭಾವವನ್ನು ಪರಿಸರ ಸಂಗತಿಗಳ ನಿದರ್ಶನದ ಮೂಲಕ ಸ್ಪಷ್ಟಪಡಿಸುವ ಅಥವಾ ಮೂರ್ತ ರೂಪದಲ್ಲಿ ಜೋಡಿಸುವ ಅಕ್ಕನ ವಚನಗಳ ರಚನೆಯ ಕುಶಲಗಾರಿಕೆ ಮೆಚ್ಚತಕ್ಕದ್ದು. ಸಾಮಾಜಿಕ ವಸ್ತುವನ್ನು ದಾಖಲಿಸುವ ವಚನಗಳು 'ಪರಿಸರ ಸಮಾಜವಾದಿ' ನಿಲುವಿನಿಂದ ಕೂಡಿರುವುದು ಅಧ್ಯಯನದಿಂದ ಗಮನಕ್ಕೆ ಬರುತ್ತದೆ.

ಕೊನೆಯ ಟಿಪ್ಪಣಿಗಳು:

೧. ಶಿವಶರಣೆಯರ ವಚನಗಳು: ಸಂ: ವೀರಣ್ಣ ರಾಜೂರ, (೨೦೨೧), ಪು-೯೯.

೨. ಅದೇ, ಪು-೧೨೬.

೩. ಅದೇ, ಪು-೬೭.

೪. ಅದೇ, ಪು-೬೭.

೫. ಅದೇ, ಪು-೭೪

೬. ಅದೇ, ಪು-೨೩.

೭. ಅದೇ, ಪು-೭೫.

೮. ಅದೇ, ಪು-೩೪-೩೫

೯. ಅದೇ, ಪು-೬೧

೧೦. ಅದೇ, ಪು-೧೧೪

೧೧. ಅದೇ, ಪು-೧೨೬

೧೨. ಅದೇ, ಪು-೫೨

೧೩. ಅದೇ, ಪು-೧೦೦

೧೪. ಅದೇ, ಪು-೧೦೬

೧೫. ಅದೇ, ಪು-೧೪೮

೧೬. ಅದೇ, ಪು-೧೧೪

೧೭. ಅದೇ, ಪು-೧೫೧

೧೮. ಅದೇ, ಪು-೧೧೮

೧೯. ಅದೇ, ಪು-೬೬

೨೦. ಅದೇ, ಪು-೮೩